## ಪೀಠಿಕೆ:–

ಚಾಮರಾಜನಗರ ಪಟ್ಟಣವು ಚಾಮರಾಜನಗರ ತಾಲ್ಲೂಕು ಮತ್ತು ಚಾಮರಾಜನಗರ ಜಿಲ್ಲೆಯ ಕೇಂದ್ರವಾಗಿದ್ದು, 2011ರ ಜನಗಣತಿಯಂತೆ 69,959 ಜನಸಂಖ್ಯೆಯನ್ನು ಹೊಂದಿರುತ್ತದೆ. ಚಾಮರಾಜನಗರ–ರಾಮಸಮುದ್ರ ನಗರಸಭೆಯು ಈ ಪಟ್ಟಣಕ್ಕೆ ಹೊಂದಿಕೊಂಡಿರುವ ಸ್ಥಳೀಯ ಸಂಸ್ಥೆಯಾಗಿರುತ್ತದೆ. ಈ ನಗರವು ರಾಜ್ಯದ ಸಾಂಸ್ಕೃತಿಕ ನಗರ ಮೈಸೂರಿನಿಂದ 61 ಕಿ.ಮೀ. ಹಾಗೂ ರಾಜ್ಯದ ರಾಜಧಾನಿ ಬೆಂಗಳೂರಿನಿಂದ 199 ಕಿ.ಮೀ. ಅಂತರದಲ್ಲಿರುತ್ತದೆ. ಬೆಂಗಳೂರು–ದಿಂಡಿಗಲ್ ರಾಷ್ಟ್ರೀಯ ಹೆದ್ದಾರಿ–209, ಚಾಮರಾಜನಗರ–ಜೇವರ್ಗಿ ರಾಷ್ಟ್ರೀಯ ಹೆದ್ದಾರಿ–150ಎ ಯಳಂದೂರು–ಗುಂಡ್ಲುಪೇಟೆ ರಾಜ್ಯ ಹೆದ್ದಾರಿ–81 ಹಾಗೂ ಚಾಮರಾಜನಗರ–ಬಿಳಿಗಿರಿರಂಗನಬೆಟ್ಟ ರಾಜ್ಯ ಹೆದ್ದಾರಿ–80 ಇವು ಈ ನಗರದ ಮೂಲಕ ಹಾದುಹೋಗುವ ಮುಖ್ಯ ಹೆದ್ದಾರಿಗಳಾಗಿವೆ. ಈ ನಗರವು ಉತ್ತಮ ಬ್ರಾಡ್ ಗೇಜ್ ರೈಲ್ವೆ ಸಂಪರ್ಕವನ್ನು ಹೊಂದಿರುತ್ತದೆ.

ಚಾಮರಾಜನಗರ ಜಿಲ್ಲೆಯ ಬಹುಪಾಲು ಭೂಭಾಗವು ಅರಣ್ಯ ಪ್ರದೇಶ ಹಾಗೂ ಬೆಟ್ಟ ಶ್ರೇಣಿಗಳಿಂದ ಕೂಡಿರುತ್ತದೆ. ಈ ಜಿಲ್ಲೆಯಲ್ಲಿ ಹಲವಾರು ಪ್ರೇಕ್ಷಣೀಯ ತಾಣಗಳು ಹಾಗೂ ಯಾತ್ರಾಸ್ಥಳಗಳಿದ್ದು ಇವುಗಳಿಂದಾಗಿ ಕೇಂದ್ರಸ್ಥಾನವಾಗಿರುವ ಚಾಮರಾಜನಗರ ಪಟ್ಟಣದ ಮೇಲೆ ನೇರ ಪರಿಣಾಮ ಬೀರುತ್ತವೆ. ಈ ಹಿನ್ನೆಲೆಯಲ್ಲಿ ಪಟ್ಟಣವನ್ನು ಯೋಜನಾಬದ್ಧವಾಗಿ ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಚಾಮರಾಜನಗರ ಪಟ್ಟಣವು ಸೇರಿದಂತೆ ಸುತ್ತಮುತ್ತಲ 27 ಗ್ರಾಮಗಳನ್ನು ಸೇರಿಸಿಕೊಂಡು ಸರ್ಕಾರವು ಒಟ್ಟು 120 ಚ.ಕಿ.ಮಿ. ವಿಸ್ತೀರ್ಣಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4(ಸಿ)ರನ್ವಯ ಸ್ಥಳೀಯ ಯೋಜನಾ ಪ್ರದೇಶ ಎಂದು ಘೋಷಿಸಿ, ಸದರಿ ಪ್ರದೇಶಕ್ಕೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987ರನ್ವಯ ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರವನ್ನು ರೂಪಿಸಿ ಆದೇಶ ಹೊರಡಿಸಿರುತ್ತದೆ. ನಗರಾಭಿವೃದ್ಧಿ ಪ್ರಾಧಿಕಾರವು ದಿನಾಂಕ: 21–08–1998 ರಿಂದ ಕಾರ್ಯಾರಂಭಗೊಂಡಿದ್ದು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಯೋಜನಾ ಬದ್ಧವಾಗಿ ಅಭಿವೃದ್ಧಿಗಳನ್ನು ನಿಯಂತ್ರಿಸುತ್ತಿದೆ. ಪ್ರಾಧಿಕಾರವು ತನ್ನ ಆರ್ಥಿಕ ಇತಿಮಿತಿಯ ನಡುವೆಯೂ ನಗರವನ್ನು ಎಲ್ಲಾ ಮೂಲಭೂತ ಸೌಕರ್ಯಗಳನ್ನೊಳಗೊಂಡ ಯೋಜನಾ ಬದ್ದವಾದ ಆರೋಗ್ಯಕರ ಹಾಗೂ ಸುಂದರ ತಾಣವಾಗಿ ರೂಪಿಸಲು ತೊಡಗಿಸಿಕೊಂಡಿರುತ್ತದೆ.

## : ವಿಷಯ ಸೂಚಿ :


| ಕ್ರಸಂ | ವಿಷಯ | ಪುಟ ಸಂಖ್ಯೆ |
|---|---|---|
| 1. | ಪ್ರಾಧಿಕಾರದ ಧ್ಯೇಯ ಉದ್ದೇಶಗಳು, ಆಡಳಿತ ವ್ಯವಸ್ಥೆ, ಕಾರ್ಯ ಚಟುವಟಿಕೆ ಹಾಗೂ ವ್ಯಾಪ್ತಿ | 1–2 |
| 2. | 2017–18 ಸಾಲಿನ ಯೋಜನೆಗಳ ವಿವರಗಳು ಹಾಗೂ ಆಯವ್ಯಯ ವಿವರ. | 3–4 |
| 3. | ಪ್ರಾಧಿಕಾರದ ಹಿಂದಿನ 2 ವರ್ಷ (2015–16, 2016–17ನೇ ಸಾಲಿನ)ಗಳ ಕಾರ್ಯಕ್ರಮ, ಯೋಜನೆಗಳು ಹಾಗೂ ಆಯವ್ಯಯ ವಿವರ. | 4-5-6 |
| 4. | ಅಧಿಕಾರಿ ಮತ್ತು ಸಿಬ್ಬಂದಿಗಳ ವಿವರ, ಖಾಲಿ ಇರುವ ಹುದ್ದೆಗಳು ಬಾಹ್ಯ ರೂಪದಲ್ಲಿ ಪಡೆದ ನೌಕರರ ವಿವರ. | 7 |
| 5. | ಲೆಕ್ಕ ತಪಾಸಣೆ, ಆಕ್ಷೇಪಣೆಗಳು, ದಾವೆಗಳು, ವಿಧಾನಸಭೆ/ಪರಿಷತ್ತು ಅಧಿವೇಶನಗಳಿಂದ ಸ್ವೀಕೃತವಾದ ಪ್ರಶ್ನೆಗಳು ಇತ್ಯಾದಿ. | 7 |
| 6. | ವಿಳಂಬಕ್ಕೆ ಕಾರಣ ನೀಡುವ ಪ್ರಪತ್ರ . | 8 |

# I.

## 1) ಪ್ರಾಧಿಕಾರದ ಧ್ಯೇಯ ಹಾಗೂ ಉದ್ದೇಶಗಳು:–

ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರವು ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ/ 365/ಎಂಐಬಿ/97 ದಿನಾಂಕ:24–04–1998 ರನ್ವಯ ರಚನೆಯಾಗಿದ್ದು, ದಿನಾಂಕ:21–09–1998 ರಿಂದ ಕಾರ್ಯಾರಂಭ ಮಾಡಿರುತ್ತದೆ. ಪ್ರಾಧಿಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ–1961 ಮತ್ತು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ–1987 ರನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ ಸಂಸ್ಥೆ(ನಗರಸಭೆ ಮತ್ತು ಗ್ರಾಮ ಪಂಚಾಯಿತಿ)ಗಳಿಗೆ ನಗರ ಯೋಜನಾ ಹಾಗೂ ಇನ್ನಿತರೆ ತಾಂತ್ರಿಕ ವಿಷಯಗಳಲ್ಲಿ ನೆರವು ಹಾಗೂ ಖಾಸಗಿ ಬಡಾವಣೆಗಳಿಗೆ ತಾಂತ್ರಿಕ ಅನುಮೋದನೆ ನೀಡಲಾಗುತ್ತಿದೆ. ಸ್ಥಳೀಯ ಯೋಜನಾ ಪ್ರದೇಶದ/ಪ್ರಾಧಿಕಾರದ ವ್ಯಾಪ್ತಿಯಲ್ಲಿ ಯೋಜನಾಬದ್ಧವಾಗಿ ಅಭಿವೃದ್ಧಿಗಳನ್ನು ನಿಯಂತ್ರಿಸುವುದು ಪ್ರಾಧಿಕಾರದ ಮುಖ್ಯ ಧ್ಯೇಯವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ನೀಡಲಾಗುವ ಅನುಮತಿಗಳಿಗೆ ಪ್ರಾಧಿಕಾರವು ಪರಿಶೀಲನಾ ಶುಲ್ಕ ಮತ್ತು ಇತರೆ ಶಾಸನಬದ್ಧ ಶುಲ್ಕಗಳನ್ನು ಭರಿಸುತ್ತಿದೆ.

## 2) ಆಡಳಿತ ವ್ಯವಸ್ಥೆ:–

**ಚಾಮರಾಜನಗರ ನಗರಾಭಿವೃದ್ಧಿ ಪ್ರಾಧಿಕಾರವು 2017–18 ನೇ ಸಾಲಿನಲ್ಲಿ ಕೆಳಕಂಡಂತೆ ಆಡಳಿತ ವ್ಯವಸ್ಥೆ ಹೊಂದಿರುತ್ತದೆ.**

| ಕ್ರಸಂ | ಶ್ರೀಯುತರ ಹೆಸರು ಮತ್ತು ವಿಳಾಸ | ಪದನಾಮ |
|---|---|---|
| 01 | ಶ್ರೀ ಸುಹೇಲ್ ಅಲಿಖಾನ್, (ದಿ:01–04–2017 ರಿಂದ 31–03–2018) | ಅಧ್ಯಕ್ಷರು |
| 02 | ಶ್ರೀ ಟಿ.ನಿಸಾರ್ ಅಹಮದ್ : (ದಿ:01–04–2017 ರಿಂದ 31–07–2017)<br>ಶ್ರೀ ಸಿ.ಲಸುಮಾನಾಯ್ಕ : (ದಿ:01–08–2017 ರಿಂದ 12–02–2018)<br>ಶ್ರೀ ಎಂ.ಉಮಾನಂದ ರೈ : (ದಿ:12–02–2018 ರಿಂದ 31–03–2018) | ಆಯುಕ್ತರು |
| 03 | ಶ್ರೀ.ಪುಟ್ಟರಂಗಶೆಟ್ಟರವರು, ಮಾನ್ಯ ಅಧ್ಯಕ್ಷರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಹಾಗೂ ವಿಧಾನಸಭಾ ಸದಸ್ಯರು, ಚಾಮರಾಜನಗರ ವಿಧಾನಸಭಾ ಕ್ಷೇತ್ರ, | ಸದಸ್ಯರು |
| 04 | ಮಾನ್ಯ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ | ಪದನಿಮಿತ್ತ ಸದಸ್ಯರು |
| 05 | ಸೂಪರಿಂಟೆಂಡೆಂಟ್ ಆಫ್ ಪೋಲಿಸ್, ಚಾಮರಾಜನಗರ ಜಿಲ್ಲೆ, ಚಾಮರಾಜನಗರ | ಪದನಿಮಿತ್ತ ಸದಸ್ಯರ |
| 06 | ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಚಾಮರಾಜನಗರ. | ಸದಸ್ಯರು |
| 07 | ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಚಾಮರಾಜನಗರ. | ಸದಸ್ಯರು |
| 08 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು & ಒಳಚರಂಡಿ ಮಂಡಳಿ, ಚಾಮರಾಜನಗರ | ಸದಸ್ಯರು |
| 09 | ಜಿಲ್ಲಾ ಆರೋಗ್ಯಾಧಿಕಾರಿಗಳು, ಚಾಮರಾಜನಗರ. | ಸದಸ್ಯರು |
| 10 | ಪೌರಾಯುಕ್ತರು, ನಗರಸಭೆ, ಚಾಮರಾಜನಗರ. | ಪದನಿಮಿತ್ತ ಸದಸ್ಯರು |
| 11 | ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಚಾಮರಾಜನಗರ.<br>ಶ್ರೀ ಸಿ.ಲಸುಮನಾಯ್ಕ (ದಿ:01–04–2017 ರಿಂದ 31–03–2018) | ನಗರ ಯೋಜನಾ ಸದಸ್ಯರು |
| 12 | ನುರಿತ ವಾಸ್ತುಶಿಲ್ಪಿ | ಸರ್ಕಾರದಿಂದ ನಾಮ ನಿರ್ದೇಶನ ಆಗಿರುವುದಿಲ್ಲ. |
| 13 | ನಗರಸಭಾ ಸದಸ್ಯರು, ಚಾಮರಾಜನಗರ. | ನಗರಸಭೆಯಿಂದ ನಾಮ ನಿರ್ದೇಶನ ಆಗಿರುವುದಿಲ್ಲ. |
| 14 | ಶ್ರೀ ಶ್ರೀಕಾಂತ (ದಿ:01–04–2017 ರಿಂದ 31–03–2018)<br>ಶ್ರೀ ಸುದರ್ಶನಗೌಡ (ದಿ:01–04–2017 ರಿಂದ 31–03–2018)<br>ಶ್ರೀಮತಿ ಆಶಾ (ದಿ:01–04–2017 ರಿಂದ 31–03–2018)<br>ಶ್ರೀ ಶ್ರೀನಿವಾಸ (ದಿ:01–04–2017 ರಿಂದ 31–03–2018) | ಸರ್ಕಾರದಿಂದ ನಾಮ ನಿರ್ದೇಶನ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. |

**3) ಕಾರ್ಯಚಟುವಟಿಕೆಗಳು:–**

ಪ್ರಾಧಿಕಾರವು ತನ್ನ ವ್ಯಾಪ್ತಿಗೆ ಮಹಾಯೋಜನೆ (ಪರಿಷ್ಕೃತ–01)–2021ನ್ನು ತಯಾರಿಸಿ ಸರ್ಕಾರದ ಅನುಮೋದನೆ ಪಡೆಯುವ, ಕಾಯ್ದೆಯನ್ವಯ ಮಹಾಯೋಜನೆಯನ್ನು ಪರಿಷ್ಕರಿಸುವ, ಮಹಾಯೋಜನೆ ರೀತ್ಯಾ ಅಭಿವೃದ್ಧಿಗಳನ್ನು ನಿಯಂತ್ರಿಸುವ ಮತ್ತು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಖಾಸಗಿ ಬಡಾವಣೆಗಳಿಗೆ ಅನುಮೋದನೆ ನೀಡುವ ಹಾಗೂ ಕಾರ್ಯಗತಗೊಳಿಸುವ, ವಸತಿ ಯೋಜನೆಗಳನ್ನು ಕೈಗೊಂಡು ಸಾರ್ವಜನಿಕರಿಗೆ ನಿವೇಶನಗಳನ್ನು ಹಂಚುವ ಮತ್ತು ಮಹಾಯೋಜನೆಯಂತೆ ವಿವಿಧ ಭೂ ಉಪಯೋಗಗಳನ್ನು ನಿಯಂತ್ರಿಸುವ ಮುಖ್ಯ ಕಾರ್ಯ ಚಟುವಟಿಕಗಳನ್ನು ಹೊಂದಿರುತ್ತದೆ.

**4) ಪ್ರಾಧಿಕಾರದ ವ್ಯಾಪ್ತಿ :–**

ಸರ್ಕಾರದ ಆದೇಶ ಸಂ:ನಅಇ/285/ಭೂ.ಬ.ವಿ/98, ದಿನಾಂಕ 31–07–1999 ರಲ್ಲಿ ಚಾಮರಾಜನಗರ ನಗರಸಭೆಯ ವ್ಯಾಪ್ತಿಯೂ ಸೇರಿದಂತೆ ಒಟ್ಟು 27 ಗ್ರಾಮಗಳನ್ನು ಸೇರಿಸಿ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಿದೆ. ಈ ವ್ಯಾಪ್ತಿಯ ಒಟ್ಟು ವಿಸ್ತೀರ್ಣ 120 ಚ.ಕಿ.ಮೀ. ಗಳಾಗಿದ್ದು, ಕೆಳಕಂಡ ಗ್ರಾಮಗಳನ್ನು ಒಳಗೊಳ್ಳುತ್ತದೆ.

| ಕ್ರ.ಸಂ | ಗ್ರಾಮದ ಹೆಸರು |
|---|---|
| 1 | ಚಾಮರಾಜನಗರ |
| 2 | ಚನ್ನಿಪುರದ ಮೋಳೆ |
| 3 | ರಾಮಸಮುದ್ರ |
| 4 | ಕರಿನಂಜನಪುರ |
| 5 | ಸೋಮವಾರಪೇಟೆ |
| 6 | ಗಾಳಿಪುರ |
| 7 | ಮೂಡ್ಲುಪುರ |
| 8 | ಮಲ್ಲಯ್ಯನಪುರ |
| 9 | ಉತ್ತುವಳ್ಳಿ |
| 10 | ಕಾಡಹಳ್ಳಿ |
| 11 | ಮಸಗಾಪುರ |
| 12 | ಮನಗಾನಹಳ್ಳಿ |
| 13 | ಮಂಚೇನಹಳ್ಳಿ |
| 14 | ಬೂದಿತಿಟ್ಟು |
| 15 | ಮರಿಯಾಲ |
| 16 | ಗಂಗವಾಡಿ |
| 17 | ಮಾದಾಪುರ |
| 18 | ದೊಡ್ಡಮೋಳೆ |
| 19 | ಕೋಡಿಮೋಳೆ |
| 20 | ಹರದನಹಳ್ಳಿ |
| 21 | ಬಂಡಿಗೆರೆ |
| 22 | ಯಡಪುರ |
| 23 | ಶಿವಪುರ |
| 24 | ಚಂದಕವಾಡಿ |
| 25 | ಕೂಡ್ಲೂರು |
| 26 | ಬಸವನಪುರ |
| 27 | ಹಂಡ್ರಕಳ್ಳಿ |

## II. 2017–18 ನೇ ಸಾಲಿನ ಕಾರ್ಯಕ್ರಮ, ಯೋಜನೆಗಳು ಹಾಗೂ ಅಯವ್ಯಯ ವಿವರಗಳು.

### (i) 2017–18ನೇ ಸಾಲಿನ ವಾರ್ಷಿಕ ವರದಿಯ(ಯೋಜನೆ) ವಿವರಗಳು (ದಿನಾಂಕ 01.04.2017 ರಿಂದ 31.03.2018 ರವರೆಗೆ)

| | | |
|---|---|---|
| 1. ವಾರ್ಷಿಕ ಆಯವ್ಯಯ ಮತ್ತು ಅದಕ್ಕನುಗುಣವಾಗಿ ವೆಚ್ಚ | 2017–18ನೇ ಸಾಲಿಗೆ ನಿರೀಕ್ಷಿತ ಆದಾಯ ರೂ. 61,65,599<br>ನಿರೀಕ್ಷಿಸಿದ್ದ ವೆಚ್ಚ ರೂ. 11,51,18,500<br>2017–18ನೇ ಸಾಲಿನ ಜಮಾ ರೂ. 60,97,961<br>ವೆಚ್ಚ ರೂ. 68,63,986 | |
| 2. ಬೇಡಿಕೆ, ವಸೂಲಿ ಮತ್ತು ಬಾಕಿ ಪಟ್ಟಿ (ಡಿ.ಸಿ.ಬಿ) | ಯಾವುದೂ ಇಲ್ಲ | |
| | ಜಮಾ ರೂ, ಗಳಲ್ಲಿ | ಖರ್ಚು ರೂ, ಗಳಲ್ಲಿ |
| 3. 2015–16ನೇ ಸಾಲಿನ ಜಮಾ ಖರ್ಚು ವಿವರ | 63,04,042 | 1,28,27,364 |
| 2016–17ನೇ ಸಾಲಿನ ಜಮಾ ಖರ್ಚು ವಿವರ | 48,32,246 | 95,52,469 |
| 2017–18ನೇ ಸಾಲಿನ ಜಮಾ ಖರ್ಚು ವಿವರ | 60,97,961 | 68,63,986 |
| 4. ಅನುಷ್ಠಾನಗೊಳಿಸಲಾದ ಅಭಿವೃದ್ಧಿ ಕಾರ್ಯಕ್ರಮಗಳ ಆರ್ಥಿಕ/ಬೌತಿಕ ಪ್ರಗತಿ | ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ಸ್ವ–ಇಚ್ಛೆಯಿಂದ ಭೂಮಿಯನ್ನು ಬಿಟ್ಟುಕೊಡುವುದಕ್ಕಾಗಿ ಪ್ರೋತ್ಸಾಹದಾಯಕ ಯೋಜನೆಗಳು) ಗಳ ನಿಯಮಗಳು, 1991 ಮತ್ತು ತಿದ್ದುಪಡಿ ಆದೇಶ The Karnataka Urban Development Authorities (Allotment of sites in lieu of compensation for the land acquired (Amendment) Rules, 2015) ರನ್ವಯ ಚಾಮರಾಜನಗರ ಮತ್ತು ಮಸಗಾಪುರ ಗ್ರಾಮದ ವಿವಿಧ ಸರ್ವೇ ನಂಬರ್‌ಗಳಲ್ಲಿ ಒಟ್ಟು 14ಎ–24ಗುಂ ಭೂಮಿಯನ್ನು ಪಡೆಯಲಾಗಿದ್ದು. ಸದರಿ ಜಮೀನಿನ ಒಟ್ಟು ವಿಸ್ತೀರ್ಣಕ್ಕೆ ಸರ್ಕಾರದಿಂದ ಭೂ ಉಪಯೋಗ ಬದಲಾವಣೆ ಪಡೆಯಲಾಗಿದ್ದು, ಸದರಿ ಪ್ರದೇಶಕ್ಕೆ 50:50 ಅನುಪಾತದಲ್ಲಿ ವಸತಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸರ್ಕಾರದ ಆದೇಶ ಸಂ:ನಅಇ 578 ಮೈಅಪ್ರಾ 2015, ಬೆಂಗಳೂರು, ದಿನಾಂಕ:25–02–2016 ರಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ರ ಕಲಂ 15(1)(ಬಿ)ರನ್ವಯ ಅನುಮೋದನೆ ನೀಡಲಾಗಿದೆ. ವಸತಿ ಯೋಜನೆಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ಕಲಂ 18 ರನ್ವಯ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲು ದಿ:04–08–2016 ರಲ್ಲಿ ಸರ್ಕಾರವನ್ನು ಕೋರಲಾಗಿತ್ತು. ಸದರಿ ವಸತಿ ಯೋಜನೆಯನ್ನು ಪರಿಶೀಲಿಸಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ(ದ) ಬೆಂಗಳೂರು ಹಾಗೂ ಮುಖ್ಯ ಇಂಜಿನಿಯರ್, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಇಲಾಖೆಯಿಂದ ತಾಂತ್ರಿಕ ಪರಿಶೀಲನೆಗೆ ಒಳಪಡಿಸಿ ಸಲ್ಲಿಸಲು ಸರ್ಕಾರವು ದಿ:23–08–2016 ರ ಪತ್ರದಲ್ಲಿ ತಿಳಿಸಲಾಗಿದೆ. ಅದರಂತೆ, ಪತ್ರ ಬರೆದು ತಾಂತ್ರಿಕ ಪರಿಶೀಲನೆ ಮಾಡಿ ಅಂದಾಜುಪಟ್ಟಿಯನ್ನು ಹಿಂದಿರುಗಿಸಲು ಕೋರಲಾಗಿ ಸದರಿ ಇಲಾಖೆಯಿಂದ ಅಂದಾಜುಪಟ್ಟಿಗಳನ್ನು ಪಡೆಯಲಾಗಿದ್ದು, ಸದರಿ ಅಂದಾಜುಪಟ್ಟಿಗಳನ್ನು ಮತ್ತು ಪ್ರಸ್ತಾವನೆಯನ್ನು ಮಾನ್ಯ ನಿರ್ದೇಶಕರು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಇವರು ಪರಿಶೀಲಿಸಿ ಸರ್ಕಾರದ ಅನುಮೋದನೆಗೆ ಕಳುಹಿಸಿರುತ್ತಾರೆ. ಸರ್ಕಾರದಿಂದ ಅನುಮೋದನೆಯಾದ ನಂತರ ಪ್ರಾಧಿಕಾರದ ವತಿಯಿಂದ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು.<br>ಚಾಮರಾಜನಗರ ಗ್ರಾಮದ ಸ.ನಂ.301/1ಎ, 302/2ಎ,3,2ಬಿ,1ಎ,1ಬಿ ರಲ್ಲಿ ಅನುಮೋದಿತ ವಸತಿ ವಿನ್ಯಾಸದಲ್ಲಿರುವ ನಾಗರೀಕ ಸೌಲಭ್ಯ ನಿವೇಶನದಲ್ಲಿ ಪ್ರಾಧಿಕಾರದ ಸ್ವಂತ ಕಟ್ಟಡ ನಿರ್ಮಿಸುವ ರೂ.98.38 ಲಕ್ಷಗಳ ಅಂದಾಜುಪಟ್ಟಿಯಂತೆ ಕೆ.ಆರ್.ಐ.ಡಿ.ಎಲ್, ಚಾಮರಾಜನಗರ ಇವರಿಗೆ ನೀಡಲಾಗಿದ್ದು, ಇಲ್ಲಿಯವರೆಗೆ ಸದರಿ ಸಂಸ್ಥೆಗೆ ರೂ.89,19,000/–ಗಳನ್ನು ಪಾವತಿಸಲಾಗಿದೆ. ಕಟ್ಟಡದ ಕೆಲಸವು ಶೀಘ್ರಗತಿಯಲ್ಲಿ ನಡೆಯುತ್ತಿದ್ದು, ಅದಷ್ಟು ಬೇಗನೆ ಪೂರ್ಣಗೊಳಿಸಲಾಗುವುದೆಂದು ಕೆ.ಆರ್.ಐ.ಡಿ.ಎಲ್, ಚಾಮರಾಜನಗರ ಇವರು ತಿಳಿಸಿರುತ್ತಾರೆ.<br>ಚಾಮರಾಜನಗರ–ರಾಮಸಮುದ್ರ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನಾ ತಾತ್ಕಾಲಿಕ (ಪರಿಷ್ಕೃತ–02)ನ್ನು ತಯಾರಿಸಲು ಸಿಂಬಾಲಿಸಿಸ್ ಆಫ್ ಟೆಕ್ನಾಲಜಿ ಇನ್‌ವೆಸ್ಟ್‌ಮೆಂಟ್ ಅಂಡ್ ಮ್ಯಾನೇಜ್‌ಮೆಂಟ್, ಬೆಂಗಳೂರು ಇವರಿಗೆ ರೂ.12,40,000/– ಗಳ ದರಪಟ್ಟಿಗೆ ಪ್ರಾಧಿಕಾರದಿಂದ ಅನುಮೋದನೆ ನೀಡಲಾಗಿದೆ. ಈಗಾಗಲೇ | |

| | |
|---|---|
| | ಮಹಾಯೋಜನಾ ತಾತ್ಕಾಲಿಕ (ಪರಿಷ್ಕೃತ-02)ರ ನಕ್ಷೆಯ ಕಾರ್ಯವು ಅಂತಿಮ ಹಂತದಲ್ಲಿದ್ದು, ಸದರಿ ಸಂಸ್ಥೆಗೆ ಇಲ್ಲಿಯವರೆಗೆ ರೂ.7,48,000/- ಗಳನ್ನು ಪಾವತಿಸಿದ್ದು, ಉಳಿಕೆ ರೂ.4,92,000/- ಗಳನ್ನು ಪಾವತಿಸಬೇಕಾಗಿರುತ್ತದೆ ಹಾಗೂ ಸದರಿ ಮಹಾಯೋಜನೆ ತಾತ್ಕಾಲಿಕ (ಪರಿಷ್ಕೃತ-02)ರ ನಕ್ಷೆ ಮತ್ತು ವರದಿಯನ್ನು ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಇವರ ಮೂಲಕ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗುವುದು. |
| 5. ತೆಗೆದುಕೊಳ್ಳಲು ಉದ್ದೇಶಿಸಲಾದ ಹೊಸ ಕಾರ್ಯಕ್ರಮಗಳ ವಿವರಗಳು | i. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ಸ್ವ-ಇಚ್ಚೆಯಿಂದ ಭೂಮಿಯನ್ನು ಬಿಟ್ಟುಕೊಡುವುದಕ್ಕಾಗಿ ಪ್ರೋತ್ಸಾಹದಾಯಕ ಯೋಜನೆಗಳು) ಗಳ ನಿಯಮಗಳು, 1991 ಮತ್ತು ತಿದ್ದುಪಡಿ ಆದೇಶ The Karnataka Urban Development Authorities (Allotment of sites in lieu of compensation for the land acquired (Amendment) Rules, 2015) ರನ್ವಯ ಚಾಮರಾಜನಗರ ಮತ್ತು ಮಸಗಾಪುರ ಗ್ರಾಮದ ವಿವಿಧ ಸರ್ವೇ ನಂಬರ್‌ಗಳಲ್ಲಿ ಒಟ್ಟು 14ಎ-26ಗುಂ ಭೂಮಿಯನ್ನು ಪಡೆಯಲಾಗಿದ್ದು. ಸದರಿ ಜಮೀನಿನ ಒಟ್ಟು ವಿಸ್ತೀರ್ಣಕ್ಕೆ ಸರ್ಕಾರದಿಂದ ಭೂ ಉಪಯೋಗ ಬದಲಾವಣೆ ಪಡೆಯಲಾಗಿದ್ದು, ಸದರಿ ಪ್ರದೇಶಕ್ಕೆ 50:50 ಅನುಪಾತದಲ್ಲಿ ವಸತಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸರ್ಕಾರದ ಆದೇಶ ಸಂ:ನಅಇ 578 ಮೈಅಪ್ರಾ 2015, ಬೆಂಗಳೂರು, ದಿನಾಂಕ:25-02-2016 ರಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ರ ಕಲಂ 15(1)(ಬಿ)ರನ್ವಯ ಅನುಮೋದನೆ ನೀಡಲಾಗಿದೆ. ವಸತಿ ಯೋಜನೆಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ಕಲಂ 18 ರನ್ವಯ ಆಡಳಿತಾತ್ಮಕ ಮಂಜೂರಾತಿಯನ್ನು ಸರ್ಕಾರದಿಂದ ಪಡೆದುಕೊಂಡು ಪ್ರಾಧಿಕಾರದ ವತಿಯಿಂದ 2018-19ನೇ ಸಾಲಿನಲ್ಲಿ ವಸತಿ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು.<br>ii. ಅನುಮೋದಿತ ವಸತಿ ಬಡಾವಣೆಗಳಲ್ಲಿನ ಉದ್ಯಾನವನ ಜಾಗೆಗಳನ್ನು ಸಂರಕ್ಷಿಸಿ, ಅಭಿವೃದ್ಧಿಪಡಿಸುವುದು<br>iii. ಮಾಸ್ಟರ್ ಪ್ಲಾನ್ ರೀತ್ಯಾ ಪ್ರಸ್ತಾವಿಸಿರುವ ಮುಖ್ಯ ರಸ್ತೆಗಳನ್ನು ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳಿಂದ ಹಣಕಾಸಿನ ನೆರವುನೊಂದಿಗೆ ಅಭಿವೃದ್ಧಿಪಡಿಸುವುದು.<br>iv. ಮಾಸ್ಟರ್ ಪ್ಲಾನ್‌ನಲ್ಲಿ ಸಾರ್ವಜನಿಕ ಉದ್ದೇಶಗಳಿಗಾಗಿ ಕಾಯ್ದಿರಿಸಲಾದ ವಿವಿಧ ಭೂಮಿಗಳನ್ನು ಭೂ-ಸ್ವಾಧೀನಪಡಿಸಿ ಅದೇ ಉದ್ದೇಶಕ್ಕೆ ಅಭಿವೃದ್ಧಿಪಡಿಸಲು ಪ್ರಯತ್ನಿಸುವುದು.<br>v. ಕೆರೆ ಅಭಿವೃದ್ಧಿ ಪ್ರಾಧಿಕಾರ ಸೂಚಿಸಿದ ಕೆರೆಗಳಿಗೆ ಸಹಾಯಧನ ನೀಡುವುದು. |
| 6. ಪ.ಜಾತಿ, ಪ.ಪಂಗಡ, ಮಹಿಳೆಯರ, ಅಲ್ಪಸಂಖ್ಯಾತರ ಅಭಿವೃದ್ಧಿ ಕಾರ್ಯಕ್ರಮಗಳು | ಯಾವುದೂ ಇಲ್ಲ |
| 7. ವಿಶೇಷ ಘಟಕ ಯೋಜನೆ/ಗಿರಿಜನ ಅಭಿವೃದ್ಧಿ ಯೋಜನೆಗಳ ವಿವರಗಳು | ಯಾವುದೂ ಇಲ್ಲ |
| 8. ಕೇಂದ್ರ ಪರಿಷ್ಕೃತ/ವಿದೇಶಿ ನೆರವಿನ ಯೋಜನೆಗಳ ವಿವರಗಳು | ಯಾವುದೂ ಇಲ್ಲ |
| 9. ಇತರೆ ಯೋಜನೆಗಳ ವಿವರಗಳು | ಯಾವುದೂ ಇಲ್ಲ |

## 2017-18ನೇ ಸಾಲಿನ ಆಯವ್ಯಯ ಸಂಕ್ಷಿಪ್ತ ವಿವರಣೆ

| ವಿವರ | 2017-18 ನೇ ಸಾಲಿನ ಅಂದಾಜು | 2017-18ನೇ ಸಾಲಿನ ವಾಸ್ತವಿಕ |
|---|---|---|
| 1 | 2 | 3 |
| ಪ್ರಾರಂಭಿಕ ಶಿಲ್ಕು | 61,65,599 | 55,36,523 |
| ಜಮೆಗಳು | 12,20,60,000 | 60,97,961 |
| ಒಟ್ಟು | 12,82,25,599 | 1,16,34,484 |
| ಖರ್ಚುಗಳು | 11,51,18,500 | 68,63,986 |
| ಮಾರ್ಚ್ ಅಂತ್ಯಕ್ಕೆ ಅಖೈರು ಶಿಲ್ಕು | 1,31,07,099 | 47,70,498 |

**ಕಳೆದ 2 ವರ್ಷಗಳಲ್ಲಿನ ಕಾರ್ಯಕ್ರಮಗಳು, ಯೋಜನೆಗಳು, ಅಯವ್ಯಯ ಹಾಗೂ ಸಾಧಿಸಿದ ಪ್ರಗತಿ**

(ii) 2015-16 **ನೇ ಸಾಲಿನ ವಾರ್ಷಿಕ ವರದಿಯ(ಯೋಜನೆ) ವಿವರಗಳು (ದಿನಾಂಕ 01.04.2015 ರಿಂದ 31.03.2016 ರವರೆಗೆ)**

| | | |
|---|---|---|
| 1. ವಾರ್ಷಿಕ ಆಯವ್ಯಯ ಮತ್ತು ಅದಕ್ಕನುಗುಣವಾಗಿ ವೆಚ್ಚ | 2015-16ನೇ ಸಾಲಿಗೆ ನಿರೀಕ್ಷಿತ ಆದಾಯ ರೂ. 7,11,00,000<br>ನಿರೀಕ್ಷಿಸಿದ್ದ ವೆಚ್ಚ ರೂ. 5,69,38,500<br>2015-16ನೇ ಸಾಲಿನ ಜಮಾ ರೂ. 63,04,042<br>ವೆಚ್ಚ ರೂ. 1,28,27,364 | |
| 2. ಬೇಡಿಕೆ, ವಸೂಲಿ ಮತ್ತು ಬಾಕಿ ಪಟ್ಟಿ (ಡಿ.ಸಿ.ಬಿ) | ಯಾವುದೂ ಇಲ್ಲ | |
| | ಜಮಾ ರೂ, ಗಳಲ್ಲಿ | ಖರ್ಚು ರೂ, ಗಳಲ್ಲಿ |
| 3. 2013-14ನೇ ಸಾಲಿನ ಜಮಾ ಖರ್ಚು ವಿವರ | 79,31,962 | 82,46,632 |
| 2014-15ನೇ ಸಾಲಿನ ಜಮಾ ಖರ್ಚು ವಿವರ | 1,08,37,856 | 19,84,125 |
| 2015-16ನೇ ಸಾಲಿನ ಜಮಾ ಖರ್ಚು ವಿವರ | 63,04,042 | 1,28,27,364 |
| 4. ಅನುಷ್ಠಾನಗೊಳಿಸಲಾದ ಅಭಿವೃದ್ಧಿ ಕಾರ್ಯಕ್ರಮಗಳ ಆರ್ಥಿಕ/ಬೌತಿಕ ಪ್ರಗತಿ | ಪಟ್ಟಣದಲ್ಲಿ ಪ್ರಮುಖವಾದ ಎರಡು ಕಡೆ ಒಟ್ಟು 4.80 ಲಕ್ಷ ವೆಚ್ಚದಲ್ಲಿ ಬಸ್ ಶೆಲ್ಟರ್ ನಿರ್ಮಿಸಲಾಗಿದೆ. ಮಾಸ್ಟರ್ ಪ್ಲಾನ್‌ನಲ್ಲಿ ಪ್ರಸ್ತಾವಿಸಿರುವ ವರ್ತುಲ ರಸ್ತೆಯ ಭಾಗಶಃ ಪಂಕ್ತೀಕರಣವನ್ನು ಮೋಜಣಿ ಮಾಡಿ ಭೂಮಿಯ ಮೇಲೆ ಗುರ್ತಿಸಲಾಗಿದೆ ಮತ್ತು ಅಭಿವೃದ್ಧಿ ಪಡಿಸಲಾಗುವುದು.<br>ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ಸ್ವ-ಇಚ್ಛೆಯಿಂದ ಭೂಮಿಯನ್ನು ಬಿಟ್ಟುಕೊಡುವುದಕ್ಕಾಗಿ ಪ್ರೋತ್ಸಾಹದಾಯಕ ಯೋಜನೆಗಳು) ಗಳ ನಿಯಮಗಳು, 1991 ಮತ್ತು ತಿದ್ದುಪಡಿ ಆದೇಶ The Karnataka Urban Development Authorities (Allotment of sites in lieu of compensation for the land acquired (Amendment) Rules, 2015) ರನ್ವಯ ಚಾಮರಾಜನಗರ ಮತ್ತು ಮಸಗಾಪುರ ಗ್ರಾಮದ ವಿವಿಧ ಸರ್ವೇ ನಂಬರ್‌ಗಳಲ್ಲಿ ಒಟ್ಟು 14ಎ-26ಗುಂ ಭೂಮಿಯನ್ನು ಪಡೆಯಲಾಗಿದ್ದು. ಸದರಿ ಜಮೀನಿನ ಒಟ್ಟು ವಿಸ್ತೀರ್ಣಕ್ಕೆ ಸರ್ಕಾರದಿಂದ ಭೂ ಉಪಯೋಗ ಬದಲಾವಣೆ ಪಡೆಯಲಾಗಿದ್ದು, ಸದರಿ ಪ್ರದೇಶಕ್ಕೆ 50:50 ಅನುಪಾತದಲ್ಲಿ ವಸತಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸರ್ಕಾರದ ಆದೇಶ ಸಂ:ನಅಇ 578 ಮೈಅಪ್ರಾ 2015, ಬೆಂಗಳೂರು, ದಿನಾಂಕ:25-02-2016 ರಂದು ಸರ್ಕಾರದ ಅನುಮೋದನೆ ನೀಡಲಾಗಿದೆ. ವಸತಿ ಯೋಜನೆಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ಕಲಂ 18 ರನ್ವಯ ಆಡಳಿತಾತ್ಮಕ ಮಂಜೂರಾತಿಯನ್ನು ಸರ್ಕಾರದಿಂದ ಪಡೆದುಕೊಂಡು ಶೀಘ್ರದಲ್ಲಿ ಪ್ರಾಧಿಕಾರದ ವತಿಯಿಂದ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು. | |
| 5. ತೆಗೆದುಕೊಳ್ಳಲು ಉದ್ದೇಶಿಸಲಾದ ಹೊಸ ಕಾರ್ಯಕ್ರಮಗಳ ವಿವರಗಳು | vi. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ಸ್ವ-ಇಚ್ಛೆಯಿಂದ ಭೂಮಿಯನ್ನು ಬಿಟ್ಟುಕೊಡುವುದಕ್ಕಾಗಿ ಪ್ರೋತ್ಸಾಹದಾಯಕ ಯೋಜನೆಗಳು) ಗಳ ನಿಯಮಗಳು, 1991 ಮತ್ತು ತಿದ್ದುಪಡಿ ಆದೇಶ The Karnataka Urban Development Authorities (Allotment of sites in lieu of compensation for the land acquired (Amendment) Rules, 2015) ರನ್ವಯ ಚಾಮರಾಜನಗರ ಮತ್ತು ಮಸಗಾಪುರ ಗ್ರಾಮದ ವಿವಿಧ ಸರ್ವೇ ನಂಬರ್‌ಗಳಲ್ಲಿ ಒಟ್ಟು 14ಎ-26ಗುಂ ಭೂಮಿಯನ್ನು ಪಡೆಯಲಾಗಿದ್ದು. ಸದರಿ ಜಮೀನಿನ ಒಟ್ಟು ವಿಸ್ತೀರ್ಣಕ್ಕೆ ಸರ್ಕಾರದಿಂದ ಭೂ ಉಪಯೋಗ ಬದಲಾವಣೆ ಪಡೆಯಲಾಗಿದ್ದು, ಸದರಿ ಪ್ರದೇಶಕ್ಕೆ 50:50 ಅನುಪಾತದಲ್ಲಿ ವಸತಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸರ್ಕಾರದ ಆದೇಶ ಸಂ:ನಅಇ 578 ಮೈಅಪ್ರಾ 2015, ಬೆಂಗಳೂರು, ದಿನಾಂಕ:25-02-2016 ರಂದು ಸರ್ಕಾರದ ಅನುಮೋದನೆ ನೀಡಲಾಗಿದೆ. ವಸತಿ ಯೋಜನೆಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ಕಲಂ 18 ರನ್ವಯ ಆಡಳಿತಾತ್ಮಕ ಮಂಜೂರಾತಿಯನ್ನು ಸರ್ಕಾರದಿಂದ ಪಡೆದುಕೊಂಡು ಪ್ರಾಧಿಕಾರದ ವತಿಯಿಂದ 2016-17ನೇ ಸಾಲಿನಲ್ಲಿ ವಸತಿ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು.<br>vii. ಅನುಮೋದಿತ ವಸತಿ ಬಡಾವಣೆಗಳಲ್ಲಿನ ಉದ್ಯಾನವನ ಜಾಗೆಗಳನ್ನು | |

| | |
|---|---|
| | ಸಂರಕ್ಷಿಸಿ, ಅಭಿವೃದ್ಧಿಪಡಿಸುವುದು<br>iii. ಮಾಸ್ಟರ್ ಪ್ಲಾನ್ ರೀತ್ಯಾ ಪ್ರಸ್ತಾವಿಸಿರುವ ಮುಖ್ಯ ರಸ್ತೆಗಳನ್ನು ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳಿಂದ ಹಣಕಾಸಿನ ನೆರವುನೊಂದಿಗೆ ಅಭಿವೃದ್ಧಿಪಡಿಸುವುದು.<br>ix. ಮಾಸ್ಟರ್ ಪ್ಲಾನ್‌ನಲ್ಲಿ ಸಾರ್ವಜನಿಕ ಉದ್ದೇಶಗಳಿಗಾಗಿ ಕಾಯ್ದಿರಿಸಲಾದ ವಿವಿಧ ಭೂಮಿಗಳನ್ನು ಭೂ-ಸ್ವಾಧೀನಪಡಿಸಿ ಅದೇ ಉದ್ದೇಶಕ್ಕೆ ಅಭಿವೃದ್ದಿಪಡಿಸಲು ಪ್ರಯತ್ನಿಸುವುದು.<br>x. ಕೆರೆ ಅಭಿವೃದ್ಧಿ ಪ್ರಾಧಿಕಾರ ಸೂಚಿಸಿದ ಕೆರೆಗಳಿಗೆ ಸಹಾಯಧನ ನೀಡುವುದು. |
| 6. ಪ.ಜಾತಿ, ಪ.ಪಂಗಡ, ಮಹಿಳೆಯರ, ಅಲ್ಪಸಂಖ್ಯಾತರ ಅಭಿವೃದ್ಧಿ ಕಾರ್ಯಕ್ರಮಗಳು | ಯಾವುದೂ ಇಲ್ಲ |
| 7. ವಿಶೇಷ ಘಟಕ ಯೋಜನೆ/ಗಿರಿಜನ ಅಭಿವೃದ್ಧಿ ಯೋಜನೆಗಳ ವಿವರಗಳು | ಯಾವುದೂ ಇಲ್ಲ |
| 8. ಕೇಂದ್ರ ಪರಿಷ್ಕೃತ/ವಿದೇಶಿ ನೆರವಿನ ಯೋಜನೆಗಳ ವಿವರಗಳು | ಯಾವುದೂ ಇಲ್ಲ |
| 9. ಇತರೆ ಯೋಜನೆಗಳ ವಿವರಗಳು | ಯಾವುದೂ ಇಲ್ಲ |

**2015-16ನೇ ಸಾಲಿನ ಆಯವ್ಯಯ ಸಂಕ್ಷಿಪ್ತ ವಿವರಣೆ**

| ವಿವರ | 2015-16 ನೇ ಸಾಲಿನ ಅಂದಾಜು | 2015-16ನೇ ಸಾಲಿನ ವಾಸ್ತವಿಕ |
|---|---|---|
| 1 | 2 | 3 |
| ಪ್ರಾರಂಭಿಕ ಶಿಲ್ಕು | 1,74,17,032 | 1,74,09,144 |
| ಜಮೆಗಳು | 7,11,00,000 | 63,04,042 |
| ಒಟ್ಟು | 8,85,17,032 | 2,37,13,186 |
| ಖರ್ಚುಗಳು | 5,69,38,500 | 1,28,27,364 |
| ಮಾರ್ಚ್ ಅಂತ್ಯಕ್ಕೆ ಅಖೈರು ಶಿಲ್ಕು | 1,08,85,822 | 1,08,85,822 |

**(iii) 2016-17ನೇ ಸಾಲಿನ ವಾರ್ಷಿಕ ವರದಿಯ(ಯೋಜನೆ) ವಿವರಗಳು (ದಿನಾಂಕ 01.04.2016 ರಿಂದ 31.03.2017 ರವರೆಗೆ)**

| | | |
|---|---|---|
| 1. ವಾರ್ಷಿಕ ಆಯವ್ಯಯ ಮತ್ತು ಅದಕ್ಕನುಗುಣವಾಗಿ ವೆಚ್ಚ | 2016-17ನೇ ಸಾಲಿಗೆ ನಿರೀಕ್ಷಿತ ಆದಾಯ ರೂ. 11,16,17,234<br>ನಿರೀಕ್ಷಿಸಿದ್ದ ವೆಚ್ಚ ರೂ. 9,88,83,500<br>2016-17ನೇ ಸಾಲಿನ ಜಮಾ ರೂ. 48,32,246<br>ವೆಚ್ಚ ರೂ. 95,52,469 | |
| 2. ಬೇಡಿಕೆ, ವಸೂಲಿ ಮತ್ತು ಬಾಕಿ ಪಟ್ಟಿ (ಡಿ.ಸಿ.ಬಿ) | ಯಾವುದೂ ಇಲ್ಲ | |
| | ಜಮಾ ರೂ, ಗಳಲ್ಲಿ | ಖರ್ಚು ರೂ, ಗಳಲ್ಲಿ |
| 3. 2014-15ನೇ ಸಾಲಿನ ಜಮಾ ಖರ್ಚು ವಿವರ | 1,08,37,856 | 19,84,125 |
| 2015-16ನೇ ಸಾಲಿನ ಜಮಾ ಖರ್ಚು ವಿವರ | 63,04,042 | 1,28,27,364 |
| 2016-17ನೇ ಸಾಲಿನ ಜಮಾ ಖರ್ಚು ವಿವರ | 48,32,246 | 95,52,469 |
| 4. ಅನುಷ್ಠಾನಗೊಳಿಸಲಾದ ಅಭಿವೃದ್ಧಿ ಕಾರ್ಯಕ್ರಮಗಳ ಆರ್ಥಿಕ/ಬೌತಿಕ ಪ್ರಗತಿ | ಚಾಮರಾಜನಗರ ತಾಲ್ಲೂಕು, ಯಡಪುರ ಗ್ರಾಮದಲ್ಲಿರುವ ಸರ್ಕಾರಿ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ ಕಟ್ಟಡ ಹತ್ತಿರ (ಗುಂಡ್ಲುಪೇಟೆ ರಸ್ತೆ) ಬಸ್ ನಿಲ್ದಾಣವನ್ನು ಒಟ್ಟು 4.80 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗಿದೆ.<br>ಚಾಮರಾಜನಗರ ಪಟ್ಟಣದ ಸೋಮವಾರಪೇಟೆ ಸತ್ಯಮಂಗಲ ರಸ್ತೆ, ಹೆಚ್.ಪಿ ಪೆಟ್ರೋಲ್ ಬಂಕ್ ಹಿಂಭಾಗದಲ್ಲಿ ರೂ.4.63 ಲಕ್ಷಗಳ ವೆಚ್ಚದಲ್ಲಿ ಕೊಳವೆ ಬಾವಿ ನಿರ್ಮಿಸಿ ತೊಂಬೆ ಹಾಗೂ ಮೋಟರ್ ಅಳವಡಿಸಲಾಗಿದೆ.<br>ಮಾಸ್ಟರ್ ಪ್ಲಾನ್‌ನಲ್ಲಿ ಪ್ರಸ್ತಾವಿಸಿರುವ ವರ್ತುಲ ರಸ್ತೆಯ ನಂಜನಗೂಡು ಮುಖ್ಯ ರಸ್ತೆಯಿಂದ ಗುಂಡ್ಲುಪೇಟೆ ಮುಖ್ಯ ರಸ್ತೆಯವರೆಗೆ 18.0ಮೀ ಅಗಲದ ರಸ್ತೆಯನ್ನು ರೂ.554.02 ಲಕ್ಷಗಳ ವೆಚ್ಚದಲ್ಲಿ ಸಿ.ಎಂ.ಎಸ್.ಎಂ.ಟಿ.ಡಿ.ಪಿ ಯೋಜನೆಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ.<br>ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ಸ್ವ-ಇಚ್ಛೆಯಿಂದ ಭೂಮಿಯನ್ನು | |

| | |
|---|---|
| | ಬಿಟ್ಟುಕೊಡುವುದಕ್ಕಾಗಿ ಪ್ರೋತ್ಸಾಹದಾಯಕ ಯೋಜನೆಗಳು) ಗಳ ನಿಯಮಗಳು, 1991 ಮತ್ತು ತಿದ್ದುಪಡಿ ಆದೇಶ The Karnataka Urban Development Authorities (Allotment of sites in lieu of compensation for the land acquired (Amendment) Rules, 2015) ರನ್ವಯ ಚಾಮರಾಜನಗರ ಮತ್ತು ಮಸಗಾಪುರ ಗ್ರಾಮದ ವಿವಿಧ ಸರ್ವೇ ನಂಬರ್‌ಗಳಲ್ಲಿ ಒಟ್ಟು 14ಎ-24ಗುಂ ಭೂಮಿಯನ್ನು ಪಡೆಯಲಾಗಿದ್ದು. ಸದರಿ ಜಮೀನಿನ ಒಟ್ಟು ವಿಸ್ತೀರ್ಣಕ್ಕೆ ಸರ್ಕಾರದಿಂದ ಭೂ ಉಪಯೋಗ ಬದಲಾವಣೆ ಪಡೆಯಲಾಗಿದ್ದು, ಸದರಿ ಪ್ರದೇಶಕ್ಕೆ 50:50 ಅನುಪಾತದಲ್ಲಿ ವಸತಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸರ್ಕಾರದ ಆದೇಶ ಸಂ:ನಅಇ 578 ಮೈಅಪ್ರಾ 2015, ಬೆಂಗಳೂರು, ದಿನಾಂಕ:25-02-2016 ರಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ರ ಕಲಂ 15(1)(ಬಿ)ರನ್ವಯ ಅನುಮೋದನೆ ನೀಡಲಾಗಿದೆ. ವಸತಿ ಯೋಜನೆಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ಕಲಂ 18 ರನ್ವಯ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲು ದಿ:04-08-2016 ರಲ್ಲಿ ಸರ್ಕಾರವನ್ನು ಕೋರಲಾಗಿತ್ತು. ಸದರಿ ವಸತಿ ಯೋಜನೆಯನ್ನು ಪರಿಶೀಲಿಸಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ(ದ) ಬೆಂಗಳೂರು ಹಾಗೂ ಮುಖ್ಯ ಇಂಜಿನಿಯರ್, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಇಲಾಖೆಯಿಂದ ತಾಂತ್ರಿಕ ಪರಿಶೀಲನೆಗೆ ಒಳಪಡಿಸಿ ಸಲ್ಲಿಸಲು ಸರ್ಕಾರವು ದಿ:23-08-2016 ರ ಪತ್ರದಲ್ಲಿ ತಿಳಿಸಲಾಗಿದೆ. ಅದರಂತೆ, ಪತ್ರ ಬರೆದು ತಾಂತ್ರಿಕ ಪರಿಶೀಲನೆ ಮಾಡಿ ಅಂದಾಜುಪಟ್ಟಿಯನ್ನು ಹಿಂದಿರುಗಿಸಲು ಕೋರಲಾಗಿ ಸದರಿ ಇಲಾಖೆಯಿಂದ ಅಂದಾಜುಪಟ್ಟಿಗಳು ಬಂದ ನಂತರ ಸರ್ಕಾರದಿಂದ ಅನುಮೋದನೆ ಪಡೆದುಕೊಂಡು ಶೀಘ್ರದಲ್ಲಿ ಪ್ರಾಧಿಕಾರದ ವತಿಯಿಂದ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು.<br>ಚಾಮರಾಜನಗರ ಗ್ರಾಮದ ಸ.ನಂ.301/1ಎ, 302/2ಎ,3,2ಬಿ,1ಎ,1ಬಿ ರಲ್ಲಿ ಅನುಮೋದಿತ ವಸತಿ ವಿನ್ಯಾಸದಲ್ಲಿರುವ ನಾಗರೀಕ ಸೌಲಭ್ಯ ನಿವೇಶನದಲ್ಲಿ ಪ್ರಾಧಿಕಾರದ ಸ್ವಂತ ಕಟ್ಟಡ ನಿರ್ಮಿಸುವ ರೂ.98.38 ಲಕ್ಷಗಳ ಅಂದಾಜುಪಟ್ಟಿಯ ಶೇ.50 ರಷ್ಟು ಅನುದಾನ ರೂ.49,19,000/-ಗಳನ್ನು ಕೆ.ಆರ್.ಐ.ಡಿ.ಎಲ್, ಚಾಮರಾಜನಗರ ಇವರಿಗೆ ನೀಡಿದ್ದು, ಕಟ್ಟಡದ ಫ್ಲಿಂತ್ ವರೆಗಿನ ಕೆಲಸವು ಪ್ರಗತಿಯಲ್ಲಿದೆ. |
| 5. ತೆಗೆದುಕೊಳ್ಳಲು ಉದ್ದೇಶಿಸಲಾದ ಹೊಸ ಕಾರ್ಯಕ್ರಮಗಳ ವಿವರಗಳು | xi. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ಸ್ವ-ಇಚ್ಚೆಯಿಂದ ಭೂಮಿಯನ್ನು ಬಿಟ್ಟುಕೊಡುವುದಕ್ಕಾಗಿ ಪ್ರೋತ್ಸಾಹದಾಯಕ ಯೋಜನೆಗಳು) ಗಳ ನಿಯಮಗಳು, 1991 ಮತ್ತು ತಿದ್ದುಪಡಿ ಆದೇಶ The Karnataka Urban Development Authorities (Allotment of sites in lieu of compensation for the land acquired (Amendment) Rules, 2015) ರನ್ವಯ ಚಾಮರಾಜನಗರ ಮತ್ತು ಮಸಗಾಪುರ ಗ್ರಾಮದ ವಿವಿಧ ಸರ್ವೇ ನಂಬರ್‌ಗಳಲ್ಲಿ ಒಟ್ಟು 14ಎ-26ಗುಂ ಭೂಮಿಯನ್ನು ಪಡೆಯಲಾಗಿದ್ದು. ಸದರಿ ಜಮೀನಿನ ಒಟ್ಟು ವಿಸ್ತೀರ್ಣಕ್ಕೆ ಸರ್ಕಾರದಿಂದ ಭೂ ಉಪಯೋಗ ಬದಲಾವಣೆ ಪಡೆಯಲಾಗಿದ್ದು, ಸದರಿ ಪ್ರದೇಶಕ್ಕೆ 50:50 ಅನುಪಾತದಲ್ಲಿ ವಸತಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸರ್ಕಾರದ ಆದೇಶ ಸಂ:ನಅಇ 578 ಮೈಅಪ್ರಾ 2015, ಬೆಂಗಳೂರು, ದಿನಾಂಕ:25-02-2016 ರಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ರ ಕಲಂ 15(1)(ಬಿ)ರನ್ವಯ ಅನುಮೋದನೆ ನೀಡಲಾಗಿದೆ. ವಸತಿ ಯೋಜನೆಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ಕಲಂ 18 ರನ್ವಯ ಆಡಳಿತಾತ್ಮಕ ಮಂಜೂರಾತಿಯನ್ನು ಸರ್ಕಾರದಿಂದ ಪಡೆದುಕೊಂಡು ಪ್ರಾಧಿಕಾರದ ವತಿಯಿಂದ 2017-18ನೇ ಸಾಲಿನಲ್ಲಿ ವಸತಿ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು.<br>xii. ಅನುಮೋದಿತ ವಸತಿ ಬಡಾವಣೆಗಳಲ್ಲಿನ ಉದ್ಯಾನವನ ಜಾಗೆಗಳನ್ನು ಸಂರಕ್ಷಿಸಿ, ಅಭಿವೃದ್ಧಿಪಡಿಸುವುದು<br>iii. ಮಾಸ್ಟರ್ ಪ್ಲಾನ್ ರೀತ್ಯಾ ಪ್ರಸ್ತಾವಿಸಿರುವ ಮುಖ್ಯ ರಸ್ತೆಗಳನ್ನು ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳಿಂದ ಹಣಕಾಸಿನ ನೆರವುನೊಂದಿಗೆ ಅಭಿವೃದ್ಧಿಪಡಿಸುವುದು. |

| | |
|---|---|
| | iv. ಮಾಸ್ಟರ್ ಪ್ಲಾನ್‌ನಲ್ಲಿ ಸಾರ್ವಜನಿಕ ಉದ್ದೇಶಗಳಿಗಾಗಿ ಕಾಯ್ದಿರಿಸಲಾದ ವಿವಿಧ ಭೂಮಿಗಳನ್ನು ಭೂ-ಸ್ವಾಧೀನಪಡಿಸಿ ಅದೇ ಉದ್ದೇಶಕ್ಕೆ ಅಭಿವೃದ್ಧಿಪಡಿಸಲು ಪ್ರಯತ್ನಿಸುವುದು.<br>xv. ಕೆರೆ ಅಭಿವೃದ್ಧಿ ಪ್ರಾಧಿಕಾರ ಸೂಚಿಸಿದ ಕೆರೆಗಳಿಗೆ ಸಹಾಯಧನ ನೀಡುವುದು. |
| 6. ಪ.ಜಾತಿ, ಪ.ಪಂಗಡ, ಮಹಿಳೆಯರ, ಅಲ್ಪಸಂಖ್ಯಾತರ ಅಭಿವೃದ್ಧಿ ಕಾರ್ಯಕ್ರಮಗಳು | ಯಾವುದೂ ಇಲ್ಲ |
| 7. ವಿಶೇಷ ಘಟಕ ಯೋಜನೆ/ಗಿರಿಜನ ಅಭಿವೃದ್ಧಿ ಯೋಜನೆಗಳ ವಿವರಗಳು | ಯಾವುದೂ ಇಲ್ಲ |
| 8. ಕೇಂದ್ರ ಪರಿಷ್ಕೃತ/ವಿದೇಶಿ ನೆರವಿನ ಯೋಜನೆಗಳ ವಿವರಗಳು | ಯಾವುದೂ ಇಲ್ಲ |
| 9. ಇತರೆ ಯೋಜನೆಗಳ ವಿವರಗಳು | ಯಾವುದೂ ಇಲ್ಲ |

**2016-17ನೇ ಸಾಲಿನ ಆಯವ್ಯಯ ಸಂಕ್ಷಿಪ್ತ ವಿವರಣೆ**

| ವಿವರ | 2016-17 ನೇ ಸಾಲಿನ ಅಂದಾಜು | 2016-17ನೇ ಸಾಲಿನ ವಾಸ್ತವಿಕ |
|---|---|---|
| 1 | 2 | 3 |
| ಪ್ರಾರಂಭಿಕ ಶಿಲ್ಕು | 1,02,57,234 | 1,08,85,822 |
| ಜಮೆಗಳು | 10,13,60,000 | 48,32,246 |
| ಒಟ್ಟು | 11,16,17,234 | 1,57,18,068 |
| ಖರ್ಚುಗಳು | 9,88,83,500 | 95,52,469 |
| ಮಾರ್ಚ್ ಅಂತ್ಯಕ್ಕೆ ಅಖೈರು ಶಿಲ್ಕು | 1,27,33,734 | 61,65,599 |

**4. ಅಧಿಕಾರಿ ಮತ್ತು ಸಿಬ್ಬಂದಿಗಳ ವಿವರ, ಖಾಲಿ ಇರುವ ಹುದ್ದೆಗಳು, ಬಾಹ್ಯ ರೂಪದಲ್ಲಿ ಪಡೆದ ವಿವರ**

| ಕ್ರ.ಸಂ. | ಪದನಾಮ | ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ | ವಿವರ | ಷರಾ |
|---|---|---|---|---|---|
| 01 | ಆಯುಕ್ತರು | 36300-53800 | 01 | ಹುದ್ದೆ ಭರ್ತಿಯಾಗಿದೆ | ಶ್ರೀ ಟಿ.ನಿಸಾರ್ ಅಹಮದ್ ನಗರ ಮತ್ತು ಗ್ರಾಮಾಂತರಯೋಜನಾ ಉಪನಿರ್ದೇಶಕರು ಇವರು ದಿನಾಂಕ:05.01.2015 ರಿಂದ 31.07.2017ರವರೆಗೆ ಶ್ರೀ ಎಂ.ಉಮಾನಂದ ರೈ, ಇವರು ದಿ:12.02.2018 ರಿಂದ ಆಯುಕ್ತರ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. |
| 02 | ನಗರ ಯೋಜನಾ ಸದಸ್ಯರು | 28100-50100 | 01 | ರಿಕ್ತಸ್ಥಾನ | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಚಾಮರಾಜನಗರ ಇವರು ದಿ:01-04-2016 ರಿಂದ ನಗರ ಯೋಜನಾ ಸದಸ್ಯರ ಹುದ್ದೆಯ ಪ್ರಭಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. |
| 03 | ಸಹಾಯಕ ಅಭಿಯಂತರರು | 22800-43200 | 01 | ರಿಕ್ತಸ್ಥಾನ | - |
| 04 | ಸಹಾಯಕ ನಗರ ಯೋಜಕರು | 17650-32000 | 01 | ರಿಕ್ತಸ್ಥಾನ | -<br>ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು,ಚಾಮರಾಜನಗರ ಇವರ ಕಚೇರಿಯ ಸಿಬ್ಬಂದಿಯ ನೆರವಿನಿಂದ ಕೆಲಸಗಳನ್ನು ನಿರ್ವಹಿಸಲಾಗುತ್ತಿದೆ. |
| 05 | ದ್ವಿತೀಯ ದರ್ಜೆ ಸಹಾಯಕರು | 11600-21000 | 01 | ರಿಕ್ತಸ್ಥಾನ | |
| 06 | ವಾಹನ ಚಾಲಕ | 11600-21000 | 01 | ರಿಕ್ತಸ್ಥಾನ | |
| 07 | ಸೇವಕ | 9600-14550 | 02 | ರಿಕ್ತಸ್ಥಾನ | |
| | **ಒಟ್ಟು** | | **08** | | |

**ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡಿರುವ ಹುದ್ದೆಗಳ ವಿವರಗಳು**

| ಕ್ರಸಂ. | ಪದನಾಮ | ಸಂಭಾವನೆ | ಹುದ್ದೆಗಳ ಸಂಖ್ಯೆ |
|---|---|---|---|
| 01 | ಕಛೇರಿ ಸಹಾಯಕರು | ರೂ. 10,694 | 02 |
| 02 | ವಾಹನ ಚಾಲಕರು | ರೂ. 10,694 | 02 |
| 03 | ಕಂಪ್ಯೂಟರ್ ಆಪರೇಟರ್ | ರೂ. 10,694 | 01 |
| 04 | ಸೇವಕ | ರೂ. 10,694 | 02 |

**5. ಲೆಕ್ಕ ತಪಾಸಣೆ ಆಕ್ಷೇಪಣೆಗಳು, ದಾವೆಗಳು, ವಿಧಾನಸಭೆ/ವಿಧಾನ ಪರಿಷತ್ ಅಧಿವೇಶನಗಳಿಂದ ಸ್ವೀಕೃತವಾದ ಪ್ರಶ್ನೆಗಳು:**

1. 2016–17 ನೇ ಸಾಲಿನ ಲೆಕ್ಕತಪಾಸಣೆಯನ್ನು ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಚಾಮರಾಜನಗರ ಇವರು ಕೈಗೊಂಡು ವರದಿಯನ್ನು ನೀಡಿದ್ದು, ಅದರ ಅನುಷ್ಠಾನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಪ್ರಾಧಿಕಾರ ಪ್ರಾರಂಭವಾದಾಗಿನಿಂದ ಈವರೆಗೆ ಒಟ್ಟು 20 ಆಕ್ಷೇಪಣೆಗಳಿದ್ದು, ಇವುಗಳ ತೀರುವಳಿಗೆ ಅಗತ್ಯ ಕ್ರಮವಹಿಸಲಾಗಿದೆ.
2. 2017–18ನೇ ಸಾಲಿನಲ್ಲಿ ವಿಧಾನಸಭೆ/ವಿಧಾನ ಪರಿಷತ್ ಅಧಿವೇಶನದಿಂದ ಒಟ್ಟು 31 ಪ್ರಶ್ನೆಗಳು ಸ್ವೀಕೃತವಾಗಿದ್ದು ಇವುಗಳಿಗೆ ಕೂಡಲೇ ಉತ್ತರಿಸಿ ಸರ್ಕಾರಕ್ಕೆ ವರದಿ ನೀಡಲಾಗಿರುತ್ತದೆ.

**ಆಯುಕ್ತರು,**
**ನಗರಾಭಿವೃದ್ಧಿ ಪ್ರಾಧಿಕಾರ,**
**ಚಾಮರಾಜನಗರ.**

## ಪ್ರಾಧಿಕಾರದ ಹೆಸರು : ಚಾಮರಾಜನಗರ-ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ

| ಕ್ರ.ಸಂ | ವರ್ಷ | ವಾರ್ಷಿಕ ವರದಿಯನ್ನು ಪೂರ್ಣಗೊಳಿಸ ಬೇಕಾದ ದಿನಾಂಕ | ವಾರ್ಷಿಕ ವರದಿಯನ್ನು ಸಿದ್ಧಪಡಿಸಿದ ದಿನಾಂಕ | ವಿಳಂಭಕ್ಕೆ ಯಾವುದಾದರೂ ಕಾರಣಗಳಿದ್ದರೆ ವಿವರ | ವಾರ್ಷಿಕ ವರದಿಯನ್ನು ಅಚ್ಚಿಗಾಗಿ ನೀಡಿದ ದಿನಾಂಕ | ವಾರ್ಷಿಕ ವರದಿಯನ್ನು ಸ್ವೀಕರಿಸಿದ ದಿನಾಂಕ | ಪ್ರತಿಗಳನ್ನು ಶಾಸಕಾಂಗ ಸಭೆಯಲ್ಲಿ ಮಂಡಿಸಲು ಸರ್ಕಾರಕ್ಕೆ ಸಲ್ಲಿಸಿದ ಪತ್ರದ ಉಲ್ಲೇಖ ಮತ್ತು ದಿನಾಂಕ | ಶಾಸಕಾಂಗ ಸಭೆಯಲ್ಲಿ ಮಂಡಿಸಲು ಉಂಟಾದ ವಿಳಂಬಕ್ಕೆ ಕಾರಣ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 1 | 2017-18 | 31.03.2018 | 11.04.2018 | ಸಿಬ್ಬಂದಿ ಕೊರತೆ, | ದಿ:16.04.2018 | ದಿ:23.04.2018 | ಸಂ/ಚಾರಾನಅಪ್ರಾ/ವಾ.ವರದಿ 17-18/01/2018-19/26 ದಿ:27-04-2018 | ಎಸ್.ಬಿ.ಎಂ ರವರು ಮಾರ್ಚ್-2018ರ ಲೆಕ್ಕ ಪತ್ರವನ್ನು ದಿನಾಂಕ: 03-04-2018 ರಂದು ನೀಡಿರುವ ಪ್ರಯುಕ್ತ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಆಡಳಿತ ಸಿಬ್ಬಂದಿ ಭರ್ತಿಯಾಗಿಲ್ಲವಾದ್ದರಿಂದ ವಿಳಂಬವಾಗಿರುತ್ತದೆ. |

**(ಎಂ.ಉಮಾನಂದ ರೈ)**
**ಆಯುಕ್ತರು,**
**ನಗರಾಭಿವೃದ್ಧಿ ಪ್ರಾಧಿಕಾರ,**
**ಚಾಮರಾಜನಗರ.**

**ಚಾಮರಾಜನಗರ-ರಾಮಸಮುದ್ರ**

**ನಗರಾಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ**

#301, ಜಿಲ್ಲಾ ಆಡಳಿತ ಭವನ, ಬಿ.ಆರ್.ಹಿಲ್ಸ್ ರಸ್ತೆ, ಚಾಮರಾಜನಗರ-571313

e-mail: udachngr@gmail.com ದೂರವಾಣಿ ಮತ್ತು ಫ್ಯಾಕ್ಸ್ ಸಂ:08226-223166

ಸಂಖ್ಯೆ:ಚಾರಾನಅಪ್ರಾ/ವಾ.ವ/16-17/2017-18/56 ದಿನಾಂಕ.22.05.2017

**ಗೆ,**

**ಕಾರ್ಯದರ್ಶಿಗಳು,**
**ನಗರಾಭಿವೃದ್ಧಿ ಇಲಾಖೆ,**
**ವಿಕಾಸ ಸೌಧ,**
**ಬೆಂಗಳೂರು.**

ಮಾನ್ಯರೇ,

**ವಿಷಯ:-** ನಗರಾಭಿವೃದ್ಧಿ ಪ್ರಾಧಿಕಾರದ 2016-17 ನೇ ಸಾಲಿನ ವಾರ್ಷಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ.

**ಉಲ್ಲೇಖ:-** ಸರ್ಕಾರದ ಪತ್ರ ಸಂ:ನಅಇ 08 ಪಿಎನ್‌ಜಿ 2017 ದಿನಾಂಕ:13.03.2017

~~~~~~~

ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಉಲ್ಲೇಖದ ಪತ್ರದಂತೆ ಚಾಮರಾಜನಗರ-ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2016-17ನೇ ಸಾಲಿನ ವಾರ್ಷಿಕ ವರದಿಯ 400 ಪುಸ್ತಕ ಪ್ರತಿಗಳು ಹಾಗೂ ಸಿ.ಡಿಯನ್ನು ಈ ಪತ್ರದೊಂದಿಗೆ ಅಡಕಗೊಳಸಿ ಸರ್ಕಾರದ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ಅಡಕ:-
1. 400 ಪುಸ್ತಕ ಪ್ರತಿಗಳು
ಹಾಗೂ 01 ಸಿ.ಡಿ

ತಮ್ಮ ವಿಶ್ವಾಸಿ,

**ಆಯುಕ್ತರು,**
**ನಗರಾಭಿವೃದ್ಧಿ ಪ್ರಾಧಿಕಾರ,**
**ಚಾಮರಾಜನಗರ.**

**ಪ್ರತಿಯನ್ನು :-**

1) ಜಂಟಿ ನಿರ್ದೇಶಕರು(ಯೋಜನೆ) ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

**ಆಯುಕ್ತರು,**
**ನಗರಾಭಿವೃದ್ಧಿ ಪ್ರಾಧಿಕಾರ,**
**ಚಾಮರಾಜನಗರ.**
~~~~~~~